

ಗಳಿಸಿದ್ದರ ಎರಡು ಪಟ್ಟು ಖರ್ಚು ಮಾಡಿಕೊಂಡಿದ್ದ. ಏನೇನೋ ಕಾರಣಗಳು... ಮೈತುಂಬ ಸಾಲ ಮಾಡಿಕೊಂಡು ಒಂದೆರಡು ವರ್ಷಗಳ ಹಿಂದಷ್ಟೇ ಅವೆಲ್ಲವನ್ನ ತೀರಿಸಿದ್ದ. ಅಪ್ಪನ ಅರ್ಥವಾಗದ ರೋಗ, ತಂಗಿ–ತಮ್ಮಂದಿರ ಓದು, ಮದುವೆ, ಹೀಗೆ ಏನೇನೋ ಮುಗಿಸೋದ್ರೊಳಗೆ ಮಾರುತಿ ಬದುಕಿನಲ್ಲಿ ಅರ್ಧ ಮೆತ್ತಗಾದಂಗ ಕಾಣಸಲಕ್ಕ ಹತ್ತಿದ್ದ. ಇಷ್ಟಾದರೂ ಅಪ್ಪ ಏಸೋ ವರ್ಷಗಳ ಕಾಲ ಹಾಸಿಗೆಯಲ್ಲೆ ಒದ್ದಾಡಿ, ಒಂದು ಹೋಳಿ ಹುಣ್ಣಿವಿ ದಿವಸ ಇಹಲೋಕ ತ್ಯಜಿಸಿದ್ದ. ಒಬ್ಬ ತಮ್ಮನಿಗೆ ಚಲೋ ನೌಕರಿ ಏನೋ ಆತು... ಆತ ಮದುವಿ ಮಾಡಿಕೆಂಡು ದೂರದ ಮುಂಬೈ ಸೇರಿದ್ದ. ನಂತರ ಅಣ್ಣ–ಅತ್ತಿಗಿನ್ನ ನೆನಪು ಮಾಡಿಕೊಂಡೂ ಬಂದಿರಲಿಲ್ಲ. ಈ ಎಲ್ಲ ಸಂಕಟದೊಳಗ ಮುಳುಗಿಹೋಗಿದ್ದ ಮಾರುತಿಗೆ ಈಗ ಇನ್ನೊಂದು ಆಘಾತ ಕಾದಿತ್ತು. ಒಮ್ಮಿಂದೊಮ್ಮೆಲೆ ಫ್ಯಾಕ್ಟ್ರಿ ಬಂದಾದ ಮೇಲೆ ಬದುಕಿನಲ್ಲಿ ಮತ್ತೊಂದು ಸಂಚಕಾರ ಅವನಿಗೆ ಕಾದಿತ್ತು. ಮನಿಗೆ ದೊಡ್ಡವ ಎನಿಸಿಕೊಂಡ ರೋಗಿಷ್ಟ ಅಪ್ಪನ ಎಲ್ಲ ಜವಾಬ್ದಾರಿ ಮಾರುತಿ ಮೇಲೆ ಬಿದ್ದು ಹಿರೇ ಮನುಷ್ಯ ಆದಂಗಾಗಿದ್ದ. ಅದ್ಹೇಗೋ ಪಾರ್ವತಿ ಅವನ ಬದುಕಿಗೆ ಬಂದು ಒಂದಷ್ಟು ಆಸರೆಯಾಗಿದ್ದಳು.

ಮದುವ್ಯಾದ ಮ್ಯಾಲ ಮಾರುತಿಗೆ ಹೊಸದೊಂದು ಜಂಜಾಟ ಸುರುವಾಗಿತ್ತು. ಹೊಸ ಬದುಕು, ಹೆಂಡತಿಯ ಆಸೆಗಳು, ಹೀಗೆ ಏನೆಲ್ಲ ಬೇಕು–ಬೇಡಗಳ ನಡುವೆ ಪಾರ್ವತಿ ದೊಡ್ಡ ಸಂಸಾರದ ಮನೆಗೆ ಹೊಂದಿಕೊಂಡಿದ್ದಳು. ಅವಳದೂ ಮಾರುತಿಯ ಊರು ಗಣೇಶಪುರದ ಪಕ್ಕದ ಸುಂಕೂರು, ಒಬ್ಬಳೆ ಮಗಳು. ಹಳ್ಳಿಯಲ್ಲಿ ತಂದೆ ಮಗನೊಟ್ಟಿಗೆ ಹೊಲ ಮನೆ ನೋಡಿಕೊಂಡಿದ್ದರು. ಹತ್ತಿರವೆ ಇದ್ದ ಊರಿಗೆ ಪಾರ್ವತಿ ಆಗಾಗ ಹೋಗಿಬರುತ್ತಿದ್ದಳು. ನೋಡ ನೋಡುತ್ತಲೆ ಮಾರುತಿಗೆ ಎರಡು ಮಕ್ಕಳಾದವು... ಎಲ್ಲಾ ಜವಾಬುದಾರಿಗಳು ಮುಗಿದವು, ಸಂಸಾರ ಹೇಗೋ ನಡೆಸೋಣ, ಸಾಲ–ಶೂಲ, ಜವಾಬುದಾರಿಗಳೆಲ್ಲ ಮುಗಿದವು... ಇನ್ನೇನಿದ್ದರು ತನ್ನ ಮತ್ತು ತನ್ನ ಸಂಸಾರದ ನಿರ್ವಹಣೆ... ಮಕ್ಕಳನ್ನು ಒಂದಷ್ಟು ಚೆನ್ನಾಗಿ ಓದಿಸಬೇಕು ಎಂದೆಲ್ಲ ಯೋಚಿಸುತ್ತಲೆ ದಿನ ತಳ್ಳುತ್ತಿದ್ದ. ಒಂದಷ್ಟು ಕಾಲ ಸುಧಾರಿಸಿಕೊಳ್ಳಲು ಎಂದುಕೊಂಡವನಿಗೆ ಇದ್ದಕ್ಕಿದ್ದಂತೆ ಫ್ಯಾಕ್ಟರಿ ಸ್ಥಗಿತಗೊಂಡ ಸುದ್ದಿ ಆಘಾತ ನೀಡಿತ್ತು.

## 3

ಹೊಸ ಫ್ಯಾಕ್ಟರಿ ಕರೆಯಲಾಗುತ್ತಿದ್ದ ಆ ಘಟಕದಲ್ಲಿ ಸುಮಾರು ಒಂದು ಸಾವಿರ ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಫ್ಯಾಕ್ಟರಿ ಉತ್ಪನ್ನ ಸ್ಥಗಿತಗೊಂಡ ನಂತರ ಅವರೆಲ್ಲ ದಿನಾಲೂ ಫ್ಯಾಕ್ಟರಿ ಮುಖ್ಯ ದ್ವಾರದ ಹತ್ತಿರ ಬಂದು ಅರ್ಧಗಂಟೆ ಕೂತು ಟೈಂಪಾಸ್ ಮಾಡಿ ಹೋಗುವ ಕೆಲಸ ನಡೆದು ಎರಡು ತಿಂಗಳಾಗಿತ್ತು. ಚಹಾ ಕುಡ್ಯಾದು, ಇಸ್ಪೀಟ ಆಡದು, ಹರಟೆ ಹೊಡೆಯದು, ಮನಿಗೆ ಹೋಗದು... ಇದೇ ಕಾಯಕವಾಗಿತ್ತು. ಒಂದೊಂದು ಸಲ ಬಂದ್ರ ಭಾಳ